# ಕಾನನ

ಡಿಸೆಂಬರ್–2025


ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



© ಧನರಾಜ್ ಎಂ.

**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

ಡಿಸೆಂಬರ್–2025

# ಲೇಖನಗಳು


* ಕಾಡಿನ ನಡುವೆ ಕಂಡ ಕಡವೆ – ಅರವಿಂದ ಕೂಡ್ಲ

* ವನಸುಮ – ಕೆ. ಪಿ. ಶಂಕರಪ್ಪ
ಶಾಂತಮ್ಮ ಎಸ್.

* ವನಬಂಧ – 07 – ಅಕ್ಷತ ಹೆಚ್. ಕೆ.

* ಕಂಬಳಿ ಹುಳು! – ಹರ್ಷಿತ ಪಿ. ಹನುಮಯ್ಯ

* ಕೋವಿಡ್ ಹೊತ್ತು ಹೋದ ಗಮ್ಮತ್ತು! (ವಿವಿ ಅಂಕಣ) – ಜೈಕುಮಾರ್ ಆರ್.

* ಚಿಟ್ಟೆ (ಕವನ) – ರಾಮಲಿಂಗ ಮಾಡಗಿರಿ

* ಪ್ರಕೃತಿ ಬಿಂಬ – ಡಾ. ವರಪ್ರಸಾದ್
ದೀಪ್ತಿ ಎನ್.


ಮುಖಪುಟ ಛಾಯಾಚಿತ್ರ

ಕೆಂಪು ಮಣ್ಣು ಮುಕ್ಕ ಹಾವು

ಮುಖಪುಟ

ನಾಗೇಶ್ ಒ. ಎಸ್.

ವಿನ್ಯಾಸ

ಧನರಾಜ್ ಎಂ.



© ಶುಭಂ ಸೋನಿ




# ಕಾಡಿನ ನಡುವೆ ಕಂಡ ಕಡವೆ

ಈ ಘಟನೆ ನಡೆದು ಬರೋಬ್ಬರಿ 12 ವರ್ಷಗಳೇ ಆಯ್ತು. ಕುದುರೆಮುಖ ರಾಷ್ಟ್ರೀಯ ಉದ್ಯಾನದಲ್ಲಿ ಹುಲಿಗಣತಿ ನಡೆಯಲಿದೆ ಎಂಬ ವಿಚಾರ ತಿಳಿಯಿತು. ನಾನಾಗ ಸಂಸೆ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಅಕ್ಟೋಬರ್ ತಿಂಗಳಿನಲ್ಲಿ ವನ್ಯಜೀವಿ ಸಪ್ತಾಹ ನಡೆದಾಗ ನಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಸ್ಪರ್ಧೆಯಲ್ಲಿ ಭಾಗವಹಿಸಲು ಕರೆದುಕೊಂಡು ಹೋಗಿ ಅರಣ್ಯ ಇಲಾಖೆಯ ಸಿಬ್ಬಂದಿಗಳ ಪರಿಚಯವಾಗಿತ್ತು. ಕುದುರೆಮುಖ ವನ್ಯಜೀವಿ ವಲಯದಲ್ಲಿ ಆರು ವಲಯಗಳು ಇವೆ. ವಲಯಮಟ್ಟದ ಎಲ್ಲ ಸ್ಪರ್ಧೆಗಳಲ್ಲೂ ನಮ್ಮ ಶಾಲೆಯ ವಿದ್ಯಾರ್ಥಿಗಳು ವಿಜೇತರಾಗಿದ್ದರು. ಹೀಗೆ ಪರಿಚಯ ಆಗಿದ್ದ ಕಾರಣ 'ಬನ್ನಿ ಮೇಷ್ಟ್ರು, ನೀವು ಬಂದ್ರೆ ಸಂತೋಷ' ಅಂತ ಹುಲಿಗಣತಿಗೆ ನನ್ನನ್ನೂ ಸೇರಿಸಿಕೊಂಡರು. ಅದು ಬರೀ ಹುಲಿಗಣತಿಯಾಗದೆ ಮಾಂಸಾಹಾರಿ ಮತ್ತು ಸಸ್ಯಾಹಾರಿ ಪ್ರಾಣಿಗಳ ಗಣತಿ ಅನ್ನುವುದು ಅಲ್ಲಿಗೆ ಹೋದ ನಂತರವೇ ನನಗೆ ಅರ್ಥವಾದದ್ದು. ಬಸ್ಸಿನಲ್ಲಿ ಪ್ರತಿವಾರ ಊರಿಗೆ ಅದೇ ಕಾಡಿನ ದಾರಿಯಲ್ಲಿ ಓಡಾಡುವ ನನಗೆ ರಾಮಚಂದ್ರ ಎಂಬ ಗಾರ್ಡ್ ಪರಿಚಯವಾಗಿದ್ದರು. ಅವರು ತಮ್ಮ ಬೀಟ್ ಗೆ ನನ್ನನ್ನು ಸೇರಿಸಿಕೊಂಡರು.

ಶಾಲೆಗೆ ಒಂದು ವಾರ ರಜೆ ಹಾಕಿ ಕಾಡು ಸುತ್ತುವ ಉತ್ಸಾಹದಿಂದ ಹೊರಟಿದ್ದೆ. ಡಿಸೆಂಬರ್ ತಿಂಗಳ ಚಳಿಯಲ್ಲಿ ಕಾಡಿನಲ್ಲಿ ಓಡಾಡುವ ಅನುಭವ ಅದ್ಭುತವಾಗಿತ್ತು. ಬೆಳ್ಳಂ ಬೆಳಗ್ಗೆ ಆರು ಗಂಟೆಗೆ ಕೊರೆಯುವ ಚಳಿಯಲ್ಲಿ ಬೈಕ್ ಹತ್ತಿಕೊಂಡು ಕುದುರೆಮುಖ ಪಟ್ಟಣದ ಕೊನೆಯಲ್ಲಿರುವ ಮ್ಯಾಗಜಿನ್ ಗುಡ್ಡದ ನಮ್ಮ ಬೀಟ್ ತಲುಪುವಷ್ಟರಲ್ಲಿ ನಮ್ಮ ಕೈಕಾಲೆಲ್ಲಾ ಮರಗಟ್ಟಿ ಹೋಗಿತ್ತು. ಬೈಕ್ ನಿಲ್ಲಿಸಿ ಗುಡ್ಡ ಹತ್ತಿ ನಡೆದು ನಮ್ಮ ಗಣತಿಯ ಜಾಗ ತಲುಪಿದಾಗ ಸೂರ್ಯ ಪೂರ್ವದಿಗಂತದಲ್ಲಿ ನಿಧಾನವಾಗಿ ಮೇಲೆ ಬರಲಾರಂಭಿಸಿದ್ದ. ನಾವಿದ್ದ ಎತ್ತರದಿಂದ ನೋಡಿದರೆ, ಬೆಟ್ಟಗಳ ಕಣಿವೆಯಲ್ಲಿ ಮಂಜು ತುಂಬಿಕೊಂಡಿರುತ್ತಿತ್ತು. ಆ ಚಂದದ ದೃಶ್ಯವನ್ನು ನೋಡಿಯೇ ಅನುಭವಿಸಬೇಕು. ನಾನಂತೂ ಕೆಲವು ನಿಮಿಷ ಅದನ್ನು ಮೈ ಮರೆತು ನೋಡುತ್ತಲೇ ನಿಂತುಬಿಟ್ಟಿದ್ದೆ.

“ಅಲ್ಲಿ ಗುಡ್ಡದ ಮೇಲೆ ಒಣಗಿದ ಹುಲ್ಲಿನಲ್ಲಿ ಒಂದು ಕಡವೆ ಗುಂಪು ಮಲಗಿತ್ತು. ನಮ್ಮನ್ನು ನೋಡಿ ಎದ್ದು ನಿಂತಿದ್ದಾವೆ” ಅಂತ ಗಾರ್ಡ್ ರಾಮಚಂದ್ರ ಕಿವಿಯಲ್ಲಿ ಪಿಸುಗುಟ್ಟಿದಾಗಲೇ ನನಗೆ ವಾಸ್ತವಕ್ಕೆ ಮರಳಿದ್ದು. ಡಿಸೆಂಬರ್ ತಿಂಗಳಿಗೆ ಆಗಲೇ ಹುಲ್ಲು ಸ್ವಲ್ಪ ಒಣಗಿ ಕಂದು ಬಣ್ಣಕ್ಕೆ ತಿರುಗಲಾರಂಭಿಸಿತ್ತು. ಹುಲ್ಲಿನ ನಡುವೆ ಐದು ಕಡವೆಗಳ ಗುಂಪು ನಮ್ಮ ಕಡೆಗೆ ಎವೆಯಿಕ್ಕದೆ ನೋಡುತ್ತಿದ್ದವು. ಒಣಗಿದ ಹುಲ್ಲಿನ ನಡುವೆ ಅವುಗಳು ಇರುವುದನ್ನು ತಕ್ಷಣ ಪತ್ತೆಹಚ್ಚುವುದು ಬಹಳ ಕಷ್ಟಕರವಾಗಿತ್ತು. ನಮ್ಮಲ್ಲಿದ್ದ ಬೈನಾಕ್ಯುಲರ್‌ನಿಂದ ಆ ದೃಶ್ಯ ನೋಡಿದಾಗ, ಆಗತಾನೇ ಹೊರಟ ಸೂರ್ಯನ ಹೊಂಬಣ್ಣದ ಕಿರಣಗಳು ಗುಡ್ಡದ ತುದಿಯನ್ನೂ ಅಲ್ಲಿ ನಿಂತಿದ್ದ ಆ ಕಡವೆಗಳ ಗುಂಪನ್ನೂ ಹೊನ್ನಿನ ಬಣ್ಣದಿಂದ ತೋಯಿಸುತ್ತಿತ್ತು. ಅದುವರೆಗೆ ಕೇವಲ ಮೃಗಾಲಯದಲ್ಲಿ ಕಡವೆ ನೋಡಿದ್ದ ನನಗೆ ಮೊದಲ ಬಾರಿ ಕಾಡಿನಲ್ಲಿ ಕಡವೆ ನೋಡಿ ಮೈ ರೋಮಾಂಚನಗೊಂಡಿತು. ಬೆಳಗಿನ ಸೂರ್ಯೋದಯ ನೋಡುತ್ತಾ ಬಿಸಿಲು ಕಾಯಿಸಿಕೊಳ್ಳುತ್ತಿದ್ದ ಅವುಗಳಿಗೆ ನಾವು ಬಂದದ್ದು ಆಗಲೇ ತಿಳಿದು ಹೋಗಿತ್ತು. ಹುಲ್ಲಿನ ಮೇಲೆ ಮಲಗಿದ್ದ ಅವುಗಳು ಎದ್ದು ನಿಂತು ತದೇಕಚಿತ್ತದಿಂದ ನಮ್ಮನ್ನೇ ನೋಡುತ್ತಿದ್ದವು. ನಾವು ಸುಮಾರು ಇನ್ನೂರು ಮೀಟರ್ ದೂರದಲ್ಲಿ ನಿಂತಿದ್ದರೂ ಅವುಗಳು ನಮ್ಮನ್ನೇ ದಿಟ್ಟಿಸಿ ನೋಡುತ್ತಿದ್ದವು. ರಾಮಚಂದ್ರರವರು ನಾವಿದ್ದ ಜಿಪಿಎಸ್ ಪಾಯಿಂಟ್ ಬರೆದಿಟ್ಟುಕೊಳ್ಳುತ್ತಿದ್ದರು. ಆ ಮನಮೋಹಕ ದೃಶ್ಯವನ್ನು ಇನ್ನು ಹತ್ತಿರದಿಂದ ಕಣ್ ತುಂಬಿಸಿಕೊಳ್ಳಲು ನಾನು ಒಂದು ಹೆಜ್ಜೆ ಮುಂದೆ ಇಡಬೇಕು ಎನ್ನುವಷ್ಟರಲ್ಲಿ ಕಡವೆಗಳು ಛಂಗನೆ ನೆಗೆದು ಬೆಟ್ಟದ ಆಕಡೆಯ ಕಣಿವೆಗೆ ಜಿಗಿದು ಮಾಯವಾದವು.




ಆ ದಿನದ ನಮ್ಮ ಗಣತಿ ಕಾರ್ಯ ಚೆನ್ನಾಗಿಯೇ ನಡೆದಿತ್ತು. ಮಧ್ಯಾಹ್ನ ಬಂದು ಸುಸ್ತಾಗಿದ್ದ ನಾನು ಊಟ ಮಾಡಿ ಒಂದು ಗಡತ್ ನಿದ್ದೆ ಹೊಡೆದೆ. ಸಂಜೆ ಚಹಾ ಕುಡಿಯಲು ಹೋದಾಗ ಫಾರೆಸ್ಟರ್ ದರ್ಶನ್ ಕೂಡಾ ಸಿಕ್ಕರು. ಜೊತೆಗೆ ಚಹಾ ಕುಡಿದು ಕುದುರೆಮುಖ ಪಟ್ಟಣದ ಕಡೆಗೆ ವಾಕಿಂಗ್ ಹೊರಟೆವು. ಒಂದು ಕಾಲದ ದೊಡ್ಡ ಕಬ್ಬಿಣದ ಅದಿರು ಗಣಿಗಾರಿಕೆಯ ಕೇಂದ್ರವಾಗಿದ್ದ ಕುದುರೆಮುಖ ಈಗ ಖಾಲಿಬಿದ್ದು ಬಿಕೋ ಎನ್ನುತ್ತಿತ್ತು. ಜನವಸತಿ ತೀರಾ ವಿರಳವಾಗಿತ್ತು. ಅರಣ್ಯ ಇಲಾಖೆ, ಪೊಲೀಸ್ ಮತ್ತು ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಯೇ ಈಗ ಪಟ್ಟಣದ ನಿವಾಸಿಗಳಾಗಿ ಉಳಿದಿದ್ದರು. ನನ್ನಂತೆಯೇ ಪಕ್ಷಿಗಳ ಬಗ್ಗೆ ಆಸಕ್ತಿ ಇದ್ದ ದರ್ಶನ್ ಆ ಕಡೆ ಬಹಳ ಹಕ್ಕಿಗಳು ನೋಡ್ಲಿಕ್ಕೆ ಸಿಗ್ತವೆ, ಹೋಗಿ ಬರೋಣ ಎಂದರು. ರಾಮಚಂದ್ರ ಕೂಡ ಸೇರಿಕೊಂಡರು. ನಾವು ಮೂರೂ ಜನ ಅಲ್ಲೇ ಹತ್ತಿರದ ಮಸೀದಿಗುಡ್ಡದ ಕಡೆಗೆ ಹೊರಟೆವು. ಪಕ್ಷಿವೀಕ್ಷಣೆ ಮಾಡುತ್ತಾ ಮುಂದೆ ಸಾಗಿದೆವು.




'ಮಸೀದಿಗುಡ್ಡದ ಕೆಳಗೆ ಒಂದು ಸಣ್ಣ ಕೆರೆ ಇದೆ, ಆ ಕಡೆ ಹೋಗೋಣ ಬನ್ನಿ, ಏನಾದ್ರೂ ಸಿಗಬಹುದು' ಎಂದು ಜೊತೆಗಿದ್ದ ಅರಣ್ಯ ಇಲಾಖೆ ಸಿಬ್ಬಂದಿಗಳು ಕರೆದುಕೊಂಡು ಹೋದರು. ದಟ್ಟವಾದ ಮರಗಳು ಮತ್ತು ಪೊದೆಗಳ ನಡುವೆ ಕೆರೆ ಇದ್ದದ್ದು ದೂರದಿಂದ ತಿಳಿಯುತ್ತಲೇ ಇರಲಿಲ್ಲ. ಕೆರೆಯ ಹತ್ತಿರ ಬರುತ್ತಿದ್ದಂತೆ ಅವರಿಬ್ಬರೂ ಗಕ್ಕನೆ ನಿಂತರು. ಯಾಕೆ ಅಂತ ತಿಳಿಯಲಿಲ್ಲ; ನಾನೂ ನಿಂತುಬಿಟ್ಟೆ. ಪ್ರತಿ ದಿನ ಕಾಡಿನಲ್ಲಿ ಓಡಾಡುವ ಅವರಿಬ್ಬರ ಕಣ್ಣು ಮತ್ತು ಕಿವಿಗಳು ಬಹಳ ಚುರುಕಾಗಿದ್ದವು. ನಾನು ಕೈಸನ್ನೆಯಲ್ಲಿ ಯಾಕೆ ಏನಾಯ್ತು ಅಂತ ಕೇಳಿದೆ. "ಕೆರೆಯಲ್ಲಿ ಕಡವೆಗಳು ನೀರು ಕುಡಿಯುತ್ತಿವೆ" ಅಂತ ಅತ್ಯಂತ ಮೆಲ್ಲಗಿನ ಧ್ವನಿಯಲ್ಲಿ ಹೇಳಿದರು. ಸುಮಾರು ಐವತ್ತರಿಂದ ನೂರು ಮೀಟರ್ ಅಂತರದಲ್ಲಿ ಕಡವೆಗಳು ನೀರು ಕುಡಿಯುತ್ತಿರುವುದು ಅಸ್ಪಷ್ಟವಾಗಿ ಕಾಣಿಸಿತು. ಕೈಯಲ್ಲಿ ಕ್ಯಾಮೆರಾ ಇತ್ತು. ಫೋಟೋ ತೆಗೆಯಲೇ ಅಂತ ಕೇಳಿದೆ. ನಿಧಾನವಾಗಿ ಮುಂದೆ ಹೋಗಿ ಪ್ರಯತ್ನಿಸಿ ಎಂದರು. ಸ್ವಲ್ಪವೂ ಶಬ್ದವಾಗದ ಹಾಗೆ ನಾಲ್ಕು ಹೆಜ್ಜೆ ಮುಂದೆ ಹೋಗಿ ಪೊದೆಗಳ ಸಂಧಿಯಲ್ಲಿ ಕ್ಯಾಮೆರಾ ಲೆನ್ಸ್ ತೂರಿಸಿ ನೋಡಿದೆ.


© ಡಾ. ಪ್ರಭಾಕರ್ ತೀರ್ಥಹಳ್ಳಿ

ದೊಡ್ಡ ಕೊಂಬುಗಳ ಎತ್ತರದ ಕಡವೆಯೊಂದು ಅದಾಗಲೇ ನಮ್ಮ ಇರುವಿಕೆಯನ್ನು ಗಮನಿಸಿತ್ತು. ತಲೆ ಎತ್ತಿ ನಮ್ಮ ಕಡೆಗೆ ತದೇಕಚಿತ್ತದಿಂದ ನೋಡುತ್ತಿತ್ತು. ಅದರ ಕುತ್ತಿಗೆಯ ನಡುವೆ ಒಂದು ಗಾಯ ಮತ್ತು ತ್ರಿಭುಜಾಕಾರದಲ್ಲಿ ಕೂದಲು ಉದುರಿತ್ತು. ಹಿಂದುಗಡೆ ಕೊಂಬಿಲ್ಲದ ಎರಡು ಕಡವೆಗಳು ನಮ್ಮ ಕಡೆಗೆ ನೋಡುತ್ತಿದ್ದವು. ಕೊಂಬಿರುವುದು ಗಂಡು ಮತ್ತು ಉಳಿದ ಎರಡು ಹೆಣ್ಣು ಇರಬೇಕು ಎಂದು ಊಹಿಸಿದೆ. ಪೊದೆಗಳ ಹಿಂದಿನಿಂದ ಬರುತ್ತಿದ್ದ ನಾವು ಅಪಾಯದ ಮುನ್ಸೂಚನೆ ಎನಿಸಿರಬೇಕು. ತನ್ನ ಮೋಟುಬಾಲವನ್ನು ಮೇಲಕ್ಕೆತ್ತಿ, ಮುಂಗಾಲಿನಿಂದ ಒಮ್ಮೆ ನೆಲಕ್ಕೆ ಗುದ್ದಿತು. ಉಳಿದ ಕಡವೆಗಳು ಎಚ್ಚರವಾದವು. ಗಂಡು ಕಡವೆ ಇನ್ನೊಮ್ಮೆ ತನ್ನ ಮುಂದಿನ ಕಾಲನ್ನು ಎತ್ತಿ ನೆಲಕ್ಕೆ ಗುದ್ದಿತು ಅದರ ಜೊತೆಗೆ ದೊಡ್ಡ ಬಸ್ಸೊಂದು ಹಾರನ್ ಹೊಡೆಯುವಂತೆ 'ಬೋಂಕ್' ಎಂದು ಜೋರಾಗಿ ಕೂಗಿತು. ಫೋಟೋ ತೆಗೆಯುವುದನ್ನು ಮರೆತು ಕ್ಯಾಮೆರಾ ಮೂಲಕ ಇವುಗಳನ್ನು ನೋಡುವುದರಲ್ಲೇ ಮಗ್ನನಾಗಿದ್ದ ನನಗೆ ಹೀಗಾಗಬಹುದು ಎಂಬ ಊಹೆಯೇ ಇರಲಿಲ್ಲ. ಕಡವೆಯ ಕೂಗಿಗೆ ಒಮ್ಮೆಲೇ ಬೆಚ್ಚಿಬಿದ್ದ ಕಾರಣ ನನ್ನ ಕೈಯಿಂದ ಕ್ಯಾಮೆರಾ ಕೆಳಗೆ ಜಾರಿತು. ಅದು ಹೇಗೋ ತಕ್ಷಣ ಹಿಡಿದುಕೊಂಡದ್ದರಿಂದ ಬಚಾವಾದೆ. ಇಲ್ಲದಿದ್ದರೆ ಕ್ಯಾಮೆರಾದ ಕತೆ ಅವತ್ತೇ ಮುಗಿದುಹೋಗುತ್ತಿತ್ತು. ಈಗಲಾದರೂ ಒಂದು ಫೋಟೋ ತೆಗೆಯೋಣವೆಂದೆನಿಸಿ ಫೋಟೋ ತೆಗೆಯಲು ಸನ್ನದ್ಧನಾದೆ. ಆದರೆ ಅಷ್ಟರಲ್ಲೇ ಹೆಣ್ಣು ಕಡವೆಗಳು ಓಡಿಹೋಗಿದ್ದವು. ಗಂಡು ಜಿಂಕೆ ಇನ್ನೊಮ್ಮೆ ಮುಂಗಾಲಿನಿಂದ ನೆಲವನ್ನು ಗುದ್ದಿ ಒಂದೇ ನೆಗೆತಕ್ಕೆ ಇನ್ನೊಂದು ಬದಿಗೆ ಹಾರಿ, ಅಲ್ಲಿಂದ ಗುಡ್ಡ ಹತ್ತಿ ಮಾಯವಾಗಿಬಿಟ್ಟಿತು. ಅವುಗಳು ಓಡುವ ಸದ್ದು ಸಣ್ಣ ಭೂಕಂಪವಾದ ಅನುಭವವಾಗಿತ್ತು.


© ಗುರುಪ್ರಸಾದ್ ಕೆ. ಆರ್.

ಈಗಲೂ ಕೆಲವೊಮ್ಮೆ ಆ ಘಟನೆಯನ್ನು ನೆನಪಿಸಿಕೊಂಡು ಮಗಳಿಗೆ ಕಥೆ ಹೇಳಬೇಕಾದರೆ ಮತ್ತೆ ರೋಮಾಂಚನವಾಗುತ್ತದೆ. ಕ್ಯಾಮೆರಾ ಕೈಜಾರಿ ಫೋಟೋ ತೆಗೆಯಲಾಗದೆ ಹೋದರೂ ಆ ಕಡವೆಯ ಚಿತ್ರ ಮಾತ್ರ ಮನಸ್ಸಿನಲ್ಲಿ ಈಗಲೂ ಅಚ್ಚಳಿಯದೆ ಉಳಿದಿದೆ.



















**ಲೇಖನ: ಅರವಿಂದ ಕೂಡ್ಲ**

ದಕ್ಷಿಣ ಕನ್ನಡ ಜಿಲ್ಲೆ




## ತಾರೆ ಮರ

**Bahera**

*Terminalia belerica*

ತಾರೆ ಮರವು (Terminalia belerica) ಶುಷ್ಕ ಒಣ ಹವೆ ಇರುವ ಪ್ರದೇಶದಲ್ಲಿ ಬೆಳೆಯುವ ದೊಡ್ಡ ಮರ. ಸಾಮಾನ್ಯವಾಗಿ ಶನಿದೇವರು ಈ ಮರದಲ್ಲಿ ವಾಸಿಸುವರು ಎಂಬುದು ಸಾಂಸ್ಕೃತಿಕ ನಂಬಿಕೆ. ಆದ್ದರಿಂದ ಈ ಮರಕ್ಕೆ ಪೂಜನೀಯ ಸ್ಥಾನ ದೊರೆತಿದೆ. ದಕ್ಷಿಣ ಭಾರತದಲ್ಲಿ ಶನಿದೇವರ ದೇವಸ್ಥಾನಗಳ ಬಳಿ ಈ ಮರವನ್ನು ಕಾಣಬಹುದು ಅಥವಾ ಈ ಮರ ಇರುವ ಕಡೆ ಶನಿದೇವರ ದೇವಸ್ಥಾನವನ್ನು ಕಟ್ಟುತ್ತಾರೆ. ಈ ಮರವನ್ನು ಶಾಂತಿಮರ ಎಂದು ಕೂಡ ಕರೆಯುತ್ತಾರೆ.

ಇದು ಭಾರತದ ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅಲ್ಲದೆ ಚೀನಾ, ಮಯನ್ಮಾರ್ ಮಲೇಶಿಯಾದ ಶುಷ್ಕ ಪ್ರದೇಶಗಳಲ್ಲಿ ಕಾಣಸಿಗುತ್ತದೆ.

ತಾರೆ ಮರ ಸುಮಾರು 50 ರಿಂದ 60 ಅಡಿ ಎತ್ತರಕ್ಕೆ ಬೆಳೆಯುವ ಬೃಹತ್ ಮರ. ಇದರ ಎಲೆಗಳು 15 ಸೆಂಟಿ ಮೀಟರ್ ಉದ್ದವಿದ್ದು, ಕೊಂಬೆಗಳ ತುದಿಯಲ್ಲಿ ಗುಚ್ಛದಂತೆ ಗುಂಪಾಗಿ ಇರುತ್ತವೆ. ಎಲೆಗಳ ಮೇಲೆ ಇರುವ ನಾಳ ರಚನೆಗಳು ಎದ್ದು ಕಾಣುತ್ತವೆ. ಮರದ ತುಂಬಾ ಎಲೆಗಳು ಇದ್ದು, ಮರವು ಉತ್ತಮ ನೆರಳು ನೀಡುತ್ತದೆ. ಬೇಸಿಗೆಯಲ್ಲಿ ಕೆಲಕಾಲ ಎಲ್ಲಾ ಎಲೆಗಳನ್ನು ಉದುರಿಸಿ ಮರವು ಬೋಳಾಗಿ ಕಾಣುತ್ತದೆ.

ಈ ಮರ ಜನವರಿಯಿಂದ ಮಾರ್ಚ್ ವರೆಗೂ ಹೂ ಬಿಡುತ್ತದೆ. ಇದರ ಹೂಗಳು ತಿಳಿ ಅರಿಶಿಣ-ಹಸಿರು ಬಣ್ಣದಲ್ಲಿರುತ್ತವೆ. ಈ ಹೂವಿನ ಮಕರಂದವು ಹಲವು ಪಕ್ಷಿಗಳಿಗೆ, ಜೇನುಹುಳು ಕೀಟಗಳಿಗೆ ಆಹಾರ ಒದಗಿಸುತ್ತದೆ. ಈ ಮರ ಪೂರ್ಣ ಪ್ರಮಾಣದಲ್ಲಿ ಹೂ ಬಿಟ್ಟಾಗ ಜೇನಿನಂತಹ ವಾಸನೆಯನ್ನು ಹೊರ ಸೂಸಿ ಈ ಮರದ ಸುತ್ತಮುತ್ತಲಿನ ವಾತಾವರಣವೇ ಜೇನಿನ ವಾಸನೆಯಿಂದ ಘಮಘಮಿಸುತ್ತದೆ. ಇದರಿಂದ ಕೀಟಗಳನ್ನು ಆಕರ್ಷಿಸಿ ಪರಾಗಸ್ಪರ್ಶಕ್ರಿಯೆ ಮಾಡಿಸಿಕೊಳ್ಳುತ್ತದೆ.

ತಾರೆ ಮರದ ಅಂಡಾಕಾರದ ಕಾಯಿಗಳು 2 ಸೆಂ. ಮೀ - 2.5 ಸೆಂ. ಮೀ ಗಾತ್ರವಿದ್ದು, ಬೂದು ಬಣ್ಣದಲ್ಲಿ ಇರುತ್ತವೆ. ಕಾಯಿಗಳ ಮೇಲೆ ಅಸ್ಪಷ್ಟ 5 ಕೋನೀಯ ಗೆರೆಗಳಿದ್ದು, ಕಾಯಿಯ ತಿರುಳು ಸೂಕ್ಷ್ಮ ಕೂದಲುಗಳಂತಹ ರಚನೆಯಿಂದ ಆವೃತವಾಗಿರುತ್ತವೆ. ಈ ಕಾಯಿಯ ಒಳಭಾಗದಲ್ಲಿ ಕಡಲೆ ಬೀಜದಂತಹ ಪಪ್ಪು ಇರುತ್ತದೆ. ಆಯುರ್ವೇದದ ತ್ರಿಫಲ ಚೂರ್ಣ ತಯಾರಿಕೆಯಲ್ಲಿ ತಾರೆ ಮರದ ಕಾಯಿಯನ್ನು ಬಳಸುವರು. ಬೂದು-ಕಂದು ಬಣ್ಣದ ತೊಗಟೆಯಿದ್ದು, ಮರದ ಕಾಂಡದಲ್ಲಿನ ತೊಗಟೆಯ ಮೇಲೆ ಅಡ್ಡಡ್ಡ ಉದ್ದುದ್ದ ಬಿರುಕುಗಳು ಇರುತ್ತವೆ. ಇದರ ಬೀಜಗಳನ್ನು ಬಿತ್ತನೆ ಮಾಡಿ ಸಸಿಗಳನ್ನು ಸುಲಭವಾಗಿ ಪಡೆಯಬಹುದು. ನಾಟಿ ಮಾಡಿದ ಬೀಜಗಳು ಮೊಳಕೆ ಒಡೆಯಲು 14 ದಿನಗಳು ಬೇಕು. ತಣ್ಣೀರಿನಲ್ಲಿ 48 ಗಂಟೆಗಳ ಕಾಲ ನೆನೆಸಿಟ್ಟು ನಂತರ ಬಿತ್ತನೆ ಮಾಡಿದರೆ ಬೇಗ ಮೊಳೆಯುತ್ತವೆ. ಬಹುಬೇಗ ಬೆಳೆಯುವ ಈ ಮರ ಉದ್ಯಾನವನಗಳಲ್ಲಿ, ರಸ್ತೆ ಬದಿಗಳಲ್ಲಿ ಬೆಳೆಯಲು ಸೂಕ್ತವಾದ ಮರ. ಜಾನುವಾರುಗಳ ಮೇವು, ಔಷಧಿಗಳಿಗೂ ಸಹ ಬಳಸುತ್ತಾರೆ.


© ನಾಗೇಶ್ ಒ. ಎಸ್.


© ನಾಗೇಶ್ ಒ. ಎಸ್.


© ನಾಗೇಶ್ ಒ. ಎಸ್.

ಈ ಮರ ಪ್ರಾಣಿ-ಪಕ್ಷಿಗಳಿಗೆ ಗೂಡು ಕಟ್ಟಿಕೊಳ್ಳಲು ಜಾಗ ದೊರಕಿಸಿಕೊಡುತ್ತದೆ. ಹಲವು ಪ್ರಭೇದದ ಪಕ್ಷಿಗಳು, ಸಸ್ತನಿಗಳ ತಂಗುದಾಣವಾಗಿದೆ. ಇದರ ಹಣ್ಣುಗಳನ್ನು ಜಿಂಕೆ

ಮೊದಲಾದ ಪ್ರಾಣಿಗಳು ತಿನ್ನುತ್ತವೆ. ಹಲವು ಪ್ರಭೇದದ ಪರಾವಲಂಬಿ ಸಸ್ಯಗಳು, ಆರ್ಕಿಡ್‌ಗಳೂ ಕೂಡ ಈ ಮರದ ಮೇಲೆ ಬೆಳೆದು ಆಶ್ರಯ ಪಡೆದುಕೊಳ್ಳುತ್ತವೆ.

ತಾರೆ ಮರದ ಔಷಧೀಯ ಗುಣಗಳ ಬಗ್ಗೆ ಹಲವಾರು ವೈಜ್ಞಾನಿಕ ಅಧ್ಯಯನಗಳು ನಡೆದಿವೆ. ಈ ಎಲ್ಲ ಅಧ್ಯಯನಗಳು ಪ್ರಾಣಿಗಳ ಮೇಲೆ ನಡೆದಿದ್ದು, ಮಾನವನ ಮೇಲೆ ಉಂಟಾಗಬಹುದಾದ ಔಷಧೀಯ ಪರಿಣಾಮದ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ನಡೆಯಬೇಕಿದೆ.

**ಕೆಲವು ವೈಜ್ಞಾನಿಕ ಅಧ್ಯಯನಗಳ ಫಲಿತಾಂಶಗಳು ಹೀಗಿವೆ:**

- **ಗಾಯ ಗುಣಮುಖಗೊಳಿಸುವಿಕೆ (Wound healing):** ಸಾಹಾ ಮತ್ತು ಸಹೋದ್ಯೋಗಿಗಳು (2011) ತಾರೆ ಮರದ ಪೇಸ್ಟ್ ಗಾಯವನ್ನು ವೇಗವಾಗಿ ಗುಣಪಡಿಸಲು ಸಹಕಾರಿಯಾಗಿದೆ ಎಂದು ವರದಿ ಮಾಡಿದ್ದಾರೆ.
- **ಮನೋನಿಲುವು ಸುಧಾರಣೆ (Antidepressant activity):** ತಾರೆ ಮರದ ಹಣ್ಣಿನ ರಸ (AETB) ಇಲಿಗಳಲ್ಲಿ ಮನೋನಿಲುವು ಸುಧಾರಿಸಿದೆ ಎಂದು ಅಧ್ಯಯನ ತೋರಿಸಿದೆ.
- **ಜಲೋದರ ನಿವಾರಣೆ (Anti-diarrheal activity):** ಬಿಮಲೇಶ್ ಕುಮಾರ್ ಅವರ ಅಧ್ಯಯನದ ಪ್ರಕಾರ ತಾರೆ ಮರದಲ್ಲಿ ಜಲೋದರ ನಿವಾರಕ ಗುಣಗಳಿವೆ.
- **ಮಧುಮೇಹ ನಿಯಂತ್ರಣ (Anti-diabetic effect):** ತಾರೆ ಮರದ ಹಣ್ಣಿನ ಸಾರ ಇನ್ಸುಲಿನ್ ಮಟ್ಟ, ರಕ್ತದಲ್ಲಿನ ಸಕ್ಕರೆ ಮತ್ತು ಕೊಬ್ಬಿನ ಪ್ರಮಾಣವನ್ನು ಸುಧಾರಿಸಿದ್ದು, ಮಧುಮೇಹದಿಂದ ಉಂಟಾಗುವ **ನೀರಿನ ಪಿಂಡದ (kidney) ಸಮಸ್ಯೆ ಮತ್ತು ಕೊಬ್ಬಿನ ಅಸಮತೋಲನ (dyslipidemia)** ತಡೆಗಟ್ಟಲು ಸಹಾಯ ಮಾಡುತ್ತದೆ. ಈ ಪರಿಣಾಮಗಳಲ್ಲಿ **methanol extract** ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದೆ.





**ಲೇಖನ: ಕೆ. ಪಿ. ಶಂಕರಪ್ಪ**

**ಶಾಂತಮ್ಮ ಎಸ್.**

ಬೆಂಗಳೂರು ಜಿಲ್ಲೆ

# ವನಬಂಧ– 07



**ಎಡದಿಂದ ಬಲಕ್ಕೆ:**

1. ಮೊದಲು ಈ ಒಗಟು ಬಿಡಿಸಿ: ಗಿಡದ ಮೇಲೆ ಹಣ್ಣು, ಹಣ್ಣಿನ ಮೇಲೆ ಗಿಡ- (4)
4. ಗಂಗಾಜಲವಂತೂ ಅಲ್ಲ, ಕೇವಲ ಒಂದು ಪ್ರಾಣಿಯ ಮೂತ್ರ ಮಾತ್ರ, ಆದರೆ ಬಹಳ ಪವಿತ್ರ - (3)
5. ಕನ್ನಡದ ಕವಿ ನಿಸಾರ್ ರವರಿಗೆ ನಿತ್ಯ ಉತ್ಸವ ಕಾಣಿಸಿದ್ದು ಈ ತರುಗಳಲ್ಲಿ- (4)
7. ಇಲಿ ಹಾವಿನ ಬಲಿಯಾಗಲಿಲ್ಲ ಏಕೆಂದರೆ ಅದು ಹೊಕ್ಕಿದ್ದು ತಿರುಗಿರುವ ಈ ಗೂಡನ್ನು- (2)
8. ರಾಮನಿಗೆ ಪತ್ನಿಯ ಅಪಹರಣದ ಬಗ್ಗೆ ತಿಳಿಸಿ, ತನ್ನಾಯುಷ್ಯ ಮುಗಿಸಿದ ಖಗಕ್ಕಿಂದು ದೇವರ ನಾಡಿನಲ್ಲಿ ವಿಶ್ವದ ಅತಿ ದೊಡ್ಡ ಪ್ರತಿಮೆ ಇದೆ- (3)
12. ಈ ಹಬ್ಬದಂದು ಮಿಸ್ ಆಗುವುದಿಲ್ಲ: ಚಳಿ, ರಜೆ, ಕೇಕ್, ನಕ್ಷತ್ರ, ಉಡುಗೊರೆ- (3)
13. ದಿವಂಗತರ ಪ್ರಾಣ ಪಕ್ಷಿ, ಹಾರುವ ಆಕಾಶವಿದಾಗಿದ್ದರೆ - (3)
15. ಮರದಲ್ಲಿ ಹುಟ್ಟುತ್ತದೆ ಮೂರು ಕಾಯಿಯ ನಂಟು, ಅದರ ಮೈಯೆಲ್ಲಾ ಅಂಟು, ಇದನ್ನು ಚಿನ್ನ, ಬಟ್ಟೆ ತೊಳೆಯಲು ಬಳಸುವುದುಂಟು- (4)

**ಮೇಲಿನಿಂದ ಕೆಳಗೆ:**

2. ಹೂಗಳ ರಾಜ, ಪರಿಮಳಕ್ಕಿಲ್ಲ ರಜಾ - (5)
3. ರಾಜನ ಗುಲಾಮ ಲಾಬಿ ಮಾಡಿ ಪಡೆದುಕೊಂಡದ್ದು ಈ ಮುಳ್ಳಿನ ಗಿಡದ ತೋಟ - (3)
6. ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಹೇಗೆ ಓದಿದರೂ ಇದೊಂದು, ಬೇಸಿಗೆಯಲ್ಲಿ ಧಗಧಗಿಸುವ ಕರುನಾಡ ಜಿಲ್ಲೆಯ ನಾಮಧೇಯ- (3)
9. ಚೈತ್ರ ಮಾಸದ ಆದಿಯಲ್ಲಿ ಸಿಹಿ- ಕಹಿ ಒಟ್ಟಾಗಿ ಬರಲಿದೆ - (3)
10. ಬೆಲೆ ಏರುತ್ತಿರುವುದರಿಂದ ಜತನವಾಗಿರಿಸಲೇಬೇಕು, ರಜೆಯಲ್ಲಿ ಖರೀದಿಸಿದ ಈ ಬೆಳ್ಳಿಯನ್ನು-(3)
11.ಇದನ್ನು ಜೀವಶಾಸ್ತ್ರಜ್ಞರು ರಕ್ತದೊಂದು ಭಾಗವೆಂದರೆ, ಅದನ್ನೇ ಭೌತಜ್ಞರು ವಸ್ತುವಿನ ಒಂದು ಸ್ಥಿತಿ ಎನ್ನುತ್ತಾರೆ! ಹಾಗಾದರೆ ನೀವೇನೆನ್ನುವಿರಿ? - (2)
12. ಇದು ಕಿರಿಕಿರಿ ಮಾಡುವ ಕೀಟವೆಂದರೂ ಕರೆಕ್ಟ! ಹಿರಿಹಿರಿದಾಡುವ ಚೆಂಡುದಾಂಡಿನ ಆಟವೆಂದರೂ ಕರೆಕ್ಟ- (3)
14. ಕದನದ ಅಂತ್ಯದಲ್ಲಿ ಬಿದ್ದಿದ್ದ ಗಂಧ ಸೂಸುವ ಇದೊಂದು ಹಳದಿ ಲೋಹ- (3).

**ಕಾನನ ವನಬಂಧ -06 (ನವೆಂಬರ್) ಉತ್ತರಗಳು:**

**ಎಡದಿಂದ ಬಲಕ್ಕೆ:**

2. ಗುಹೆ 5. ಮಕರಂದ 7. ಸೆಣಬು 9. ರೋರರ್ 11. ಕೀರ 12. ತಾರಸಿ ತೋಟ 15. ಲಾಮ 16. ಲಿಪಿ 17. ರಸಬಾಳೆ 18. ತುಡುವೆ.

**ಮೇಲಿನಿಂದ ಕೆಳಗೆ:**

1. ಮಾನಸ ಸರೋವರ 3. ಹೆಗ್ಗಣ 4. ಆಕಳು 6. ಧನ್ವಂತರಿ 8. ಬುದ್ಧ 10. ಧರಣಿಯೆಲ್ಲ ಬೆಳೆ 11. ಕೀಟ 13. ಬೆಂಕಿ ಇರುವೆ 14. ಜಾಲಿ ಮರ 15. ಲಾಸೋನ್.

**ವನಬಂಧ - 06 ಅಂಕಣಕ್ಕೆ ಸರಿಯಾದ ಉತ್ತರ ಕೊಟ್ಟ ಎಲ್ಲರಿಗೂ ಧನ್ಯವಾದಗಳು**

1. ಸ್ವೀಕೃತ ಹೆಚ್ ಕೆ (ಶಿವಮೊಗ್ಗ)
2. ಸೌಮ್ಯ (ದಕ್ಷಿಣ ಕನ್ನಡ)

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"**

ವನಬಂಧ: **ಅಕ್ಷತ ಹೆಚ್. ಕೆ.**

ಚಿಕ್ಕಮಗಳೂರು ಜಿಲ್ಲೆ




# ಕಂಬಳಿ ಹುಳು!

ಡಿಸೆಂಬರ್ ತಿಂಗಳು ಬಂತು ಎಂದರೆ ಭಯ ಶುರುವಾಗುತ್ತೆ. ಚಳಿ ಅಂತಲ್ಲ! ಈ ಕಂಬಳಿ ಹುಳುಗಳ ಹಾವಳಿಗೆ. ಯಾವ ಗೋಡೆ ನೋಡಿದರೂ ಕಂಬಳಿ ಹುಳುಗಳದ್ದೇ ದರ್ಬಾರು! ಲೆಪಿಡೊಪ್ಟೆರಾ ಗಣಕ್ಕೆ ಸೇರಿದ ಇದಕ್ಕೆ ಸಾಮಾನ್ಯ ಹೆಸರು "ಕ್ಯಾಟರ್ಪಿಲ್ಲರ್ " ಎಂದು.

ಇವುಗಳ ದೇಹವನ್ನು ತಲೆಯ ಭಾಗ, ಎದೆಯ ಭಾಗ ಮತ್ತು ಉದರ ಭಾಗ ಎಂಬ ಮೂರು ಭಾಗಗಳಾಗಿ ವಿಂಗಡಿಸಬಹುದು. ಇವುಗಳಿಗೆ ಮೂರು ಜೊತೆ ಸಂಧಿಪಾದಗಳಿವೆ (ಜಾಯಿಂಟ್ಸ್) ಅದು ಎದೆಯ ಭಾಗದಲ್ಲಿ ಇದರ ಕೊನೆಯಲ್ಲಿ/ತುದಿಯಲ್ಲಿ ಕೊಂಡಿಗಳು ಕಂಡುಬರುತ್ತವೆ. ಉದರ ಭಾಗದಲ್ಲಿ ಪಾದಗಳನ್ನು ನೋಡಬಹುದು. ಅದು ಐದು ಜೊತೆ ಇರಬಹುದು ಅಥವಾ ಒಂದು ಪ್ರಭೇದಕ್ಕಿಂತ ಇನ್ನೊಂದಕ್ಕೆ ವ್ಯತ್ಯಾಸವೂ ಇರಬಹುದು. ದಪ್ಪ ಮತ್ತು ದುಂಡಾದ ಕಾಲುಗಳು; ಅದರ ತುದಿಯಲ್ಲಿ ಮುಳ್ಳುಗಳಂತ ರಚನೆಗಳು; ಚಲಿಸುವಾಗ ಈ ಮುಳ್ಳುಗಳು ಗೋಡೆ, ಗಿಡವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಸಹಾಯ ಮಾಡುತ್ತವೆ. ತಲೆಯು ಗಟ್ಟಿಯಾದ ಕ್ಯೂಟಿಕಲ್ ಕವಚದಿಂದ ಆವರಿಸಿದ್ದು, ತಲೆಯ ಭಾಗದಲ್ಲಿ ಒಂದು ಜೊತೆ ತುಂಡಾದ ಕುಡಿಮೀಸೆಗಳನ್ನು ತುದಿಯಲ್ಲಿ ನೋಡಬಹುದು. ಇದರ ದವಡೆಗಳು (mandibles) ಗಟ್ಟಿ ಹಾಗೂ ಶಕ್ತಿಯುತವಾಗಿವೆ. ಬದಿಯಲ್ಲಿ ಇರುವ ಮಾಕ್ಸಿಲಾ ಭಾಗಗಳು ಬಹಳ ಚಿಕ್ಕದಾಗಿರುವುದರಿಂದ ಸಾಮಾನ್ಯ ಕಣ್ಣಿಗೆ ಸ್ಪಷ್ಟವಾಗಿ ಕಾಣುವುದಿಲ್ಲ. ಕೆಳ ತುಟಿಯ ಬಳಿ ಇರುವ ವಿಶೇಷ ರೇಷ್ಮೆ ಗ್ರಂಥಿಗಳು ದ್ರವ ರೂಪದ ಪದಾರ್ಥವನ್ನು ಹೊರಸೂಸುತ್ತವೆ. ಇದು ಸ್ಪಿನ್ನರೆಟ್ ಮೂಲಕ ಹೊರಬಂದ ತಕ್ಷಣ ಗಟ್ಟಿಯಾಗಿ, ನಾವು ಕಾಣುವ ರೇಷ್ಮೆಯಂತ ದಾರವಾಗಿ ರೂಪುಗೊಳ್ಳುತ್ತದೆ.

© ಶ್ರೀಕಾಂತ್ ಎ. ವಿ.



ಕೆಲವು ಕಂಬಳಿಹುಳುಗಳ ದೇಹದ ಮೇಲ್ಮೈ ತುಂಬೆಲ್ಲಾ ದಟ್ಟವಾಗಿ ರೋಮಗಳು ಅಥವಾ ಗುಚ್ಛಗಳಂತೆ ಕಾಣುವ ಕೂದಲುಗಳಿರುತ್ತವೆ. ಇವುಗಳನ್ನು ಮುಟ್ಟಿದಾಗ ಅಥವಾ ಅವು ನಮ್ಮ ಬಟ್ಟೆ, ಚರ್ಮದ ಮೇಲೆ ಹರಿದಾಗ, ಈ ರೋಮಗಳ ತುದಿ ಚರ್ಮಕ್ಕೆ ತಾಗುತ್ತಿದ್ದಂತೆ ಅದರಲ್ಲಿರುವ ಸೂಕ್ಷ್ಮ ಕಿರಿಕಿರಿ ಉಂಟುಮಾಡುವ ರಾಸಾಯನಿಕಗಳು ಚರ್ಮಕ್ಕೆ ಸೋಕಿ ಉರಿ, ಕೆರೆತ ಮತ್ತು ಸುಡುವಂಥ ಅನುಭವವನ್ನು ಕೊಡುತ್ತವೆ. ಈ ಕಿರಿಕಿರಿಯನ್ನು ಉಂಟುಮಾಡುವ ಪ್ರಮಾಣ ಮತ್ತು ತೀವ್ರತೆ ಪ್ರಭೇದದಿಂದ ಪ್ರಭೇದಕ್ಕೆ ಬದಲಾಗುತ್ತದೆ. ಕೆಲ ಕಂಬಳಿಹುಳುಗಳ ಮುಳ್ಳುಗಳು ಸಂಪೂರ್ಣ ಹಾನಿರಹಿತವಾಗಿದ್ದರೂ, ಕೆಲವು ಜಾತಿಗಳಿಗೆ ರೋಮವಿಲ್ಲದೇ ನುಣ್ಣಗೆ ಇರುವ ದೇಹವೂ ಕಂಡುಬರುತ್ತದೆ. ಆದ್ದರಿಂದ ಕಂಬಳಿಹುಳುಗಳು ನಾನಾ ರೂಪ-ರಂಗಗಳಲ್ಲಿ ಕಾಣಿಸುತ್ತವೆ.















ಕಂಬಳಿಹುಳುಗಳಲ್ಲಿ ಕೆಲವು ಹಗಲಿನಲ್ಲಿ ಕ್ರಿಯಾಶೀಲವಾಗಿದ್ದರೆ ಇನ್ನು ಕೆಲವು ರಾತ್ರಿ ಹೊತ್ತು ಕ್ರಿಯಾಶೀಲವಾಗಿರುತ್ತವೆ. ಈ ಹುಳುಗಳಲ್ಲಿ ಹಲವಾರು ಸುಂದರವಾದ ಬಲು ಆಕರ್ಷಿತವಾದವುಗಳನ್ನು ಕಾಣಬಹುದು. ಕೆಲವು ಕಣ್ಣಿಗೆ ರಂಜಿಸುವಂತಾ ಬಣ್ಣ ಹೊಂದಿದ್ದು ನೋಡಲು ಆಕರ್ಷಕವಾದರೆ ಕೆಲವು ನೋಡಲು ವಿಚಿತ್ರ ಎನಿಸುತ್ತವೆ. ಇವು ಸಾಮಾನ್ಯವಾಗಿ ಸಸ್ಯಾಹಾರಿಗಳೇ. ಆದ್ದರಿಂದ ಎಲೆ, ತೊಗಟೆಯನ್ನು ತಿಂದು ಸಸ್ಯಹಾನಿ ಮಾಡುತ್ತವೆ. ಕೆಲವು ಪ್ರಭೇದದ ಕಂಬಳಿಹುಳುಗಳು ಮಾಂಸಹಾರಿಗಳು ಆಗಿವೆ. ಇರುವೆ ಗೂಡಿನ ಮೊಟ್ಟೆಗಳನ್ನು, ಸಸ್ಯ ತಿಗಣೆಗಳನ್ನು ಹಾಗು ಅದರ ಜಾತಿಯ ಹುಳುಗಳನ್ನೇ ತಿಂದು ತೇಗುತ್ತವೆ. ಇವು ಬಹು ಬೇಗ ಬೆಳವಣಿಗೆಯಾಗಿ, ಕೆಲವು ಎರಡೇ ವಾರಗಳಲ್ಲಿ ದೇಹದ ಆಕಾರ ದುಪ್ಪಟ್ಟುಗೊಂಡು ದೇಹದ ಬೆಳವಣಿಗೆ ಸ್ಥಗಿತಗೊಳ್ಳುತ್ತದೆ. ಇವು ತಿನ್ನುವುದನ್ನು ನಿಲ್ಲಿಸಿ ತನ್ನ ಸುತ್ತಲೂ ಕೋಟೆಯ ಹಾಗೆ ಪೊರೆಯನ್ನು ಹೆಣೆದುಕೊಂಡು ತನಗೆ ತಾನೇ ಅದರಲ್ಲಿ ಬಂಧಿಯಾಗುತ್ತವೆ. ಅದರ ದೇಹ ಈ ವೇಳೆ ಪರಿವರ್ತನೆಗೊಂಡು ಸುಂದರವಾದ ಪತಂಗ ಅಥವಾ ಚಿಟ್ಟೆಯಾಗಿ ಹೊರಬರುತ್ತವೆ.















ನಾನು ಮೊದಲೇ ಹೇಳಿದ ಹಾಗೆ ಕಂಬಳಿ ಹುಳುಗಳು ಅಂದ್ರೆ ಭಯವಾಗೋದು ಸಹಜ, ಯಾಕಂದ್ರೆ ಅವು ನೋಡಲು ಭಯಾನಕವಾಗಿರುತ್ತವೆ ಹಾಗು ಅವು ಸೋಕಿದರೆ ಮೈಯೆಲ್ಲಾ ಉರಿ, ಕೆರೆತ ಶುರುವಾಗಿ ಕಂಬಳಿ ಹುಳುಗಳ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಆಲೋಚನೆಯೂ ಬರುತ್ತದೆ. ಆದರೆ ಅವುಗಳ ಜೀವನ ಚಕ್ರವನ್ನು ನೋಡಿದರೆ ಅವುಗಳೇ ಮುಂದೆ ನಾವು ಆನಂದಿಸುವ ಚಿಟ್ಟೆ ಅಥವಾ ಪತಂಗವಾಗಿ ಹೊರಹೊಮ್ಮುತ್ತವೆ ಎಂದರೆ ಆಶ್ಚರ್ಯವಾಗುತ್ತದೆ ಅಲ್ಲವೇ? ಅದರ ಜೊತೆಗೆ ಇದರಲ್ಲಿ ಮಾನವರಾದ ನಾವು ಜೀವನದ ಪ್ರಮುಖ ಪಾಠ ಕಲಿಯಬಹುದು. ಜೀವನದಲ್ಲಿ ನಾವು ಎಷ್ಟೇ ಕಷ್ಟಗಳನ್ನು ಕಂಡರು, ಅನುಭವಿಸಿದರೂ ಮುಂದೆ ಕಂಬಳಿಹುಳು ಸುಂದರವಾದ ಚಿಟ್ಟೆಯಾಗುವಂತೆ ನಮಗೂ ಒಂದು ಸುಂದರ ಜೀವನ ಸಿಗುತ್ತದೆ ಎನ್ನುವುದನ್ನು ಮರೆಯಬಾರದು ಎಂಬುದನ್ನು ಚಿಟ್ಟೆಗಳ ಜೀವನ ಕಲಿಸುತ್ತದೆ.

ಮುಂದೆ ನೀವು ಕಂಬಳಿ ಹುಳುಗಳನ್ನು ನೋಡಿ ಅಸಹ್ಯ ಪಡುವುದು, ಅದನ್ನ ಸಾಯಿಸುವುದಕ್ಕೂ ಮುಂಚೆ ಒಮ್ಮೆ ಆಲೋಚಿಸಿ? ಭಯಂಕರ ವಿಕೃತ ಜೀವಿಯೊಂದು ಎಲ್ಲರೂ ಇಷ್ಟಪಡುವಂತ ಸುಂದರ, ಆಕರ್ಷಕ ಚಿಟ್ಟೆ ಅಥವಾ ಪತಂಗವಾಗಿ ಹೊರಹೊಮ್ಮಿ ಎಲ್ಲರಿಗೂ ಮಾದರಿಯಾಗುವಂತೆ ಮಾಡುವ, ಅದರ ಹಂತಗಳನ್ನು ಒಮ್ಮೆ ನೆನಪಿಸಿಕೊಳ್ಳಿ.

ನಿಮಗೂ ಮುಂದೆ ಏನನ್ನಾದರೂ ಸಾಧಿಸಬಲ್ಲೇ ಎಂಬ ಧೈರ್ಯ, ಹುಮ್ಮಸ್ಸು ಬರಬಹುದು!

ಏನಂತೀರಾ?




**ಲೇಖನ: ಹರ್ಷಿತ ಪಿ. ಹನುಮಯ್ಯ**

ಬೆಂಗಳೂರು ಗ್ರಾಮಾಂತರ ಜಿಲ್ಲೆ



ವಿವಿ ಅಂಕಣ

# ಕೋವಿಡ್ ಹೊತ್ತು ಹೋದ ಗಮ್ಮತ್ತು!

ಕೋವಿಡ್ ಮಹಾಮಾರಿ ನಮ್ಮ ತಲೆಮಾರು ಕಂಡ ಅತಿದೊಡ್ಡ ಸಾಂಕ್ರಾಮಿಕ. ನನಗಿನ್ನೂ ನೆನಪಿದೆ, ನಮ್ಮೂರ ಪಕ್ಕದ ಊರಾದ ಕಾಟೇರಿದೊಡ್ಡಿ ಬೆಟ್ಟದ ಒಂದು ಕೊನೆಯಲ್ಲಿ ನಿಂತು ನೋಡಿದರೆ ಇಡೀ ಭೂಮಿ ಗುಂಡಾಗಿರುವುದು ನಿಜ ಎನ್ನುವಂತಹ ದೃಶ್ಯ ಕಾಣುತ್ತಿತ್ತು. ಅಂದು ರಾತ್ರಿ ಆ ದೊಡ್ಡಿ ಬೆಟ್ಟದ ಮೇಲೆ ಕೂತು ಹಾಗೆ ನೋಡುತ್ತಿದ್ದರೆ, ‘ಅರೇ… ಇಡೀ ಭೂಮಿಯಲ್ಲಿರುವ ಎಲ್ಲಾ ದೇಶಗಳಲ್ಲಿ ಈಗ ಏನೂ ನಡೆಯುತ್ತಿಲ್ಲ. ಇಡೀ ಭೂಮಿ ಸ್ತಬ್ಧ! ಈ ಕೋವಿಡ್ ಕಾರಣದಿಂದಾಗಿ ಯಾವ ಮನುಷ್ಯಜೀವಿಯೂ ಇನ್ನೊಂದು ಮನುಷ್ಯ ಜೀವಿಯ ಜೊತೆ ಮಾತನಾಡಲೂ ಸಹ ಬಿಡುತ್ತಿಲ್ಲ. ಎಂಥಾ ವಿಪರ್ಯಾಸ?’ ಅನಿಸುತ್ತಿತ್ತು. ಆ ಒಂದೂವರೆ ವರುಷ ಒಬ್ಬೊಬ್ಬರಿಗೂ ಒಂದೊಂದು ಮರೆಯಲಾಗದ ಅನುಭವ. ಮಾತುಗಳಿಲ್ಲ, ಬರೀ ಭಾವನೆಗಳ ಭಾರೀ ಬುತ್ತಿಯಷ್ಟೆ. ಹೊರಲೂ ಆಗದು, ಇಳಿಸಲೂ ಆಗದು! ಆ ಸಮಯದಲ್ಲೇ ಆದ ಇನ್ನೊಂದು ವಿಪರ್ಯಾಸ ಅಂದರೆ, ನಮಗೆಲ್ಲರಿಗೂ ಒಂದಷ್ಟು ದಿನ ಕಳೆದು ಹೋದ 'ವಾಸನೆಯ ಅನುಭವ'. ಹೌದಲ್ಲವೇ… ಯಾವ ಸೌಗಂಧವೇ ಆಗಲಿ ಅಥವಾ ದುರ್ಗಂಧವೇ ಆಗಲಿ. ಏನೂ ಅರಿಯಲಾಗದ ಆ ಸಮಯದ ವಾಸನೆ ಈಗಲು ಒಮ್ಮೊಮ್ಮೆ ಬೀಸುತ್ತದೆ. ನಾವು ತಿನ್ನುವ ಎಲ್ಲಾ ಆಹಾರ ಪದಾರ್ಥಗಳಿಗೆ ಪೂರಕವಾಗಿ ಸವಿಯುವ ಆ ವಾಸನೆಯ ಸಾಮರ್ಥ್ಯ ಕಳೆದುಕೊಂಡಾಗಲಂತೂ… ಅಬ್ಬಬ್ಬಾ, ನೀರಸ. ಆದರೆ ಆ ಅನುಭವಗಳು ಕೆಲವು ದಿನಗಳಿದ್ದು ಹೊರಟು ಹೋದವು ಅಲ್ಲವೇ, ನಂತರ ನಾವು ನಮ್ಮ ವಾಸನಾ ಗ್ರಹಣ ಸಾಮರ್ಥ್ಯವನ್ನು ಪಡೆದುಕೊಂಡು ಈಗ ಎಂದಿನಂತೆ ಸುಗಂಧಗಳನ್ನು ಆಸ್ವಾಧಿಸುತ್ತಾ ಬಂದಿದ್ದೇವೆ.



ಹೌದಾ? ನಿಜವಾಗಿಯೂ ನಮ್ಮ ವಾಸನೆ ಗ್ರಹಿಕೆ ಸಾಮರ್ಥ್ಯ ನಮಗೆ 100% ಬಂತೇ? ಅಥವಾ ಈಗಲೂ ಸಹ ಕೆಲವು ವಾಸನೆಗಳನ್ನು ಗ್ರಹಿಸಲಾಗದೆ, ಅದಕ್ಕೆ ಹೆಚ್ಚಿನ ಗಮನ ಹರಿಸದೆ, ನಮ್ಮ ನಿರತ ದೈನಂದಿನ ಕೆಲಸಗಳಲ್ಲಿ ತೊಡಗಿಬಿಡುತ್ತಿದ್ದೇವೆಯೇ? ಇಂತಹ ಪ್ರಶ್ನೆಗಳನ್ನು ಒಮ್ಮೆ ಹಾಕಿಕೊಂಡು ನೋಡಿ. ಏಕೆಂದರೆ ಇನ್ನೂ ಕೆಲವರಿಗೆ ಕೋವಿಡ್ ಸಮಯದಲ್ಲಿ ಕಳೆದುಕೊಂಡ ವಾಸನಾ ಸಾಮರ್ಥ್ಯ ಇನ್ನೂ ಪೂರ್ಣವಾಗಿ ಹಿಂದಿರುಗಿಲ್ಲ! ಎನ್ನುತ್ತಿದೆ ಸಂಶೋಧನೆಯೊಂದು. ಅಹುದು, ಲಿಯೋರ ಎಂಬ ಸಂಶೋಧಕಿಯ ಗಮನಿಕೆ ಹಾಗೂ ಸಂಶೋಧನೆಯ ಪ್ರಕಾರ ಕೋವಿಡ್ ಬಾಧಿತ ಇನ್ನೂ ಎಷ್ಟೋ ಜನಕ್ಕೆ ತಾವು ಗ್ರಹಿಸುವ ವಾಸನೆಗಳು ಪೂರ್ಣವಾಗಿ ಗ್ರಹಿಸಲಾಗುತ್ತಿಲ್ಲ ಎನ್ನುವುದೇ ಗೊತ್ತಿಲ್ಲ. ಇಂತಹ ವಿಚಾರಗಳಲ್ಲಿ ಸಾಮಾನ್ಯವಾಗಿ ಹೆಚ್ಚು ಸಂಶೋಧನೆಗಳು ನಡೆಯುವುದಿಲ್ಲ ಎನ್ನುತ್ತಾರೆ ಲಿಯೋರ. ಅದಕ್ಕಾಗಿಯೇ ಅವರ ತಂಡ ಸುಮಾರು 3000 ವ್ಯಕ್ತಿಗಳನ್ನು ಈ ಸಂಶೋಧನೆಗಾಗಿ ಕರೆಸಿ, 40 ವಿವಿಧ ಬಗೆಯ ವಾಸನೆಗಳನ್ನು ಗ್ರಹಿಸಲು ಬಿಟ್ಟರು. ಉದಾಹರಣೆಗೆ, ಟರ್ಪೆಂಟೈನ್ ವಾಸನೆ, ಚೀವಿಂಗ್ ಗಮ್ ವಾಸನೆ, ನಿಂಬೆಯ ವಾಸನೆ, ಹೀಗೆ. ಕೊನೆಗೆ ಅವರಿಗೆ ತಿಳಿದದ್ದು ಇದು. ಸುಮಾರು 80% ಭಾಗದ ಜನ ತಾವು ಸಲೀಸಾಗಿ ಗ್ರಹಿಸುತ್ತಿದ್ದ ವಾಸನೆಗಳನ್ನು ಈಗ ಗ್ರಹಿಸಲು ಆಗುತ್ತಿಲ್ಲ. ಕಾರಣ ಅವರು ಕೋವಿಡ್ ಸಮಯದಲ್ಲಿ ಕಳೆದುಕೊಂಡ ಆ ಸಾಮರ್ಥ್ಯ ಪೂರ್ಣವಾಗಿ ಇನ್ನೂ ಮರುಕಳಿಸಿಲ್ಲ. ಅಂದ ಮಾತ್ರಕ್ಕೆ ಅವರಿಗೆ ಗ್ರಹಿಸುವ ಸಾಮರ್ಥ್ಯವೇ ಇಲ್ಲ ಎಂದಲ್ಲ. ಬದಲಿಗೆ ಅದು ಮೊದಲಿನಷ್ಟು ಗಟ್ಟಿಯಾಗಿಲ್ಲ.


© John Coletti_Getty Images

ಇದು ಸಾಮಾನ್ಯವಾಗಿ ತಿಳಿದು ಬರುವುದಿಲ್ಲ. ಏಕೆಂದರೆ ಹೀಗೆ ನಮಗೆ ವಾಸನೆ ಗ್ರಹಿಕೆ ಕಡಿಮೆ ಆಗಿರುವ ವಿಚಾರ ನಾವು ಗಮನಿಸಿರುವುದಿಲ್ಲ. ಹೋಗಲಿ ಬಿಡಿ ಆದರೇನು? ದೊಡ್ಡ ಸಮಸ್ಯೆಯಾದರೂ ಏನು? ಸ್ವಲ್ಪ ಗ್ರಹಿಕೆ ಕಡಿಮೆ ಆಗಿದೆ ಅಷ್ಟೇ ತಾನೆ? ನಡೆಯುತ್ತೆ... ಅಂದುಕೊಂಡೀರಿ ಹುಷಾರ್. ಈ ಕಡಿಮೆಯಾದ ಸಾಮರ್ಥ್ಯದ ಪರಿಣಾಮ ದುಬಾರಿಯಾದೀತು. ಎಂದು ಎಚ್ಚರಿಸುತ್ತಾರೆ ಲಿಯೋರ. ಏಕೆಂದರೆ ಇದರಿಂದಾಗಿ ಲೀಕ್ ಆಗುತ್ತಿರುವ ಗ್ಯಾಸ್ ನ ವಾಸನೆ ಗ್ರಹಿಕೆ ಆಗದೇ ಇರಬಹುದು, ಹಾಳಾದ ಆಹಾರ ಪದಾರ್ಥದ ಅರಿವು ಆಗದೇ ಇರಬಹುದು ಅಥವಾ ಬೆಂಕಿ ಉರಿಯುವ ಸೂಚನೆಯಾದ ಹೊಗೆ ವಾಸನೆಯೇ ತಿಳಿಯದೇ ಇರಬಹುದು. ಆದ್ದರಿಂದ ವಾಸನೆ ಗ್ರಹಿಕೆಯ ಸಾಮರ್ಥ್ಯ ಕಡಿಮೆಯಾಗಿದೆ ಎಂಬ ಅನುಮಾನವೇನಾದರೂ ನಿಮಗೆ ಇದ್ದರೆ ಅದನ್ನು ಒಮ್ಮೆ ವೈದ್ಯರಿಗೆ ತೋರಿಸುವುದು ಒಳಿತು.

ನಮ್ಮ ತನು-ಮನದ ಆರೋಗ್ಯಕರ ವರ್ತಮಾನ ಹಾಗೂ ಭವಿಷ್ಯತ್ತಿಗಾಗಿಯೇ ಬಳಸಬೇಕಾದ ನಮ್ಮ ಇಂದ್ರಿಯಗಳನ್ನು ಸರಿಯಾದ ರೂಪದಲ್ಲಿ ರಕ್ಷಿಸಿಕೊಳ್ಳುವುದು ನಮ್ಮದೇ ಕರ್ತವ್ಯ. ಏಕೆಂದರೆ ಅವುಗಳಿಲ್ಲದೇ ನಮ್ಮ ಸುತ್ತಲಿನ ಪರಪಂಚದ ಗಮ್ಮತ್ತು ಯಾರಿಗೆ ತಿಳಿಯುತ್ತಿತ್ತು? ಆದ್ದರಿಂದ ನಮ್ಮ ಇಂದ್ರಿಯಗಳನ್ನು ಬಳಸಬೇಕಾದ ಜಾಗಗಳಲ್ಲೇ ಬಳಸಿ, ಸರಿಯಾದ ಮಾಹಿತಿಯನ್ನು ನೀಡಿ ಬೆಳೆಸಿ, ನೆಮ್ಮದಿಯಿಂದ ಜೀವಿಸಿ. ಆ ಘಮ್... ಹೊತ್ತು ಇರಲಿ ಯಾವತ್ತೂ...




**Source:** [www.snexplores.org](http://www.snexplores.org)



**ಲೇಖನ: ಜೈಕುಮಾರ್ ಆರ್.**

**ಬೆಂಗಳೂರು ನಗರ ಜಿಲ್ಲೆ**

# ಚಿಟ್ಟೆ

ಜಿಗಿದಾಡಿ ನಲಿಯುವ ಚಿಟ್ಟೆ
ಬಣ್ಣ ಬಣ್ಣದ ಬಟ್ಟೆಯ ತೊಟ್ಟೆ
ಮನಕೆ ಆಸೆಯ ಬಲೆಯ ಬಿಟ್ಟೆ
ಪ್ರೀತಿಯ ಮನಸ ಕದ್ದೇ ಬಿಟ್ಟೆ

ನಿನ್ನ ಚೆಲುವಿಗೆ ಮೈ ಮರೆಸಿಬಿಟ್ಟೆ
ಆಸೆಯ ಮೊಗ್ಗೊಡೆಸಿಬಿಟ್ಟೆ
ಹೂದುಟಿಗೆ ಮುತ್ತನಿಟ್ಟೆ
ಮಕರಂದ ಸವಿದು ಬಿಟ್ಟೆ

ನಿನಗಾಗಿ ಮನಸನು ಕೊಟ್ಟೆ
ಹಿರಿದಾಯಿತು ಕನಸಿನ ಕಟ್ಟೆ
ಎಲ್ಲಾ ಎಲ್ಲೇ ನೀ ಸುಟ್ಟೆ
ಬದುಕಿನ ಗುಟ್ಟ ರಟ್ಟು ಮಾಡಿಟ್ಟೆ

ಹೂವು ಹಣ್ಣಾಗಲು ಪರಾಗಸ್ಪರ್ಶ ಮಾಡಿ
ಧರಣಿಯ ಋಣಭಾರ ತೀರಿಸಿಬಿಟ್ಟೆ
ನಲಿ ನಲಿಯುತ ಬದುಕಲು ತೋರಿಸಿಕೊಟ್ಟೆ
ಜೀವನದ ಸವಿಯ ಸವಿದುಬಿಟ್ಟೆ

ವಾರ-ಹತ್ತು ದಿನದ ಜೀವನದೊಳಗ
ಅಂದವನ್ನೆಲ್ಲಾ ಬಿಚ್ಚಿ ಇಟ್ಟೆ
ಬದುಕಿನ ಬವಣೆಯ ಸುತ್ತಿಬಿಟ್ಟೆ
ಜಗ ಮುಗಿಸುತ್ತಾ ಪಯಣಕ್ಕೆ ವಿರಾಮವಿಟ್ಟೆ

- ರಾಮಲಿಂಗ ಮಾಡಗಿರಿ
ರಾಯಚೂರು ಜಿಲ್ಲೆ

© ಡಾ. ಅಶ್ವಥ ಕೆ. ಎನ್.

# ಪ್ರಕೃತಿ ಬಿಂಬ



**ರೇಸರ್ ಹಾವು** © ಡಾ. ವರಪ್ರಸಾದ್

ಭಾರತೀಯ ಉಪಖಂಡದ ಹೆಚ್ಚಿನ ಭಾಗಗಳಲ್ಲಿನ ಒಣ ಹುಲ್ಲುಗಾವಲುಗಳು, ಕುರುಚಲು ಕಾಡುಗಳು, ಕೃಷಿ ಭೂಮಿಗಳು ಮತ್ತು ನಗರದ ಹೊರವಲಯದಲ್ಲಿ ಕಂಡುಬರುವ ಈ ವಿಷಕಾರಿಯಲ್ಲದ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಆರ್ಗೈರೋಜೆನಾ ಫ್ಯಾಸಿಯೋಲಾಟ (Argyrogena fasciolata) ಎಂದು ಕರೆಯಲಾಗುತ್ತದೆ. ವೇಗವಾಗಿ ಚಲಿಸುವ ಈ ಹಾವಿನ ದೇಹವು ತೆಳುವಾಗಿದ್ದು, ನಯವಾದ ಹುರುಪೆಗಳಿರುವ ಕೆಂಪು ಮಿಶ್ರಿತ ಕಂದು ಬಣ್ಣದ ಮೇಲ್ಭಾಗವನ್ನು ಹೊಂದಿರುತ್ತದೆ. ಹೊಟ್ಟೆಯ ಭಾಗವು ಹಳದಿ ಅಥವಾ ಬಿಳಿ ಬಣ್ಣದಲ್ಲಿರುತ್ತದೆ. ಮರಿಗಳಲ್ಲಿ ಬಿಳಿ ಅಡ್ಡಪಟ್ಟಿಗಳನ್ನು ಕಾಣಬಹುದು. ವಯಸ್ಕ ಹಾವಿನ ಮುಂಭಾಗದಲ್ಲಿ ಮಂದ ಪಟ್ಟಿಗಳಿರುತ್ತವೆ, ಆದರೆ ಹಲವುಗಳಲ್ಲಿ ಪಟ್ಟಿಗಳಿರುವುದಿಲ್ಲ. ಎತ್ತರದ ಹುಲ್ಲು ಮತ್ತು ಪೊದೆಗಳ ಬಳಿ ಕಂಡುಬರುತ್ತದೆ. ಇಲಿಗಳ ಬಿಲಗಳು, ಕಲ್ಲಿನ ರಾಶಿಗಳು ಮತ್ತು ದಟ್ಟವಾದ ಪೊದೆಗಳಲ್ಲಿ ಅಡಗಿಕೊಳ್ಳುತ್ತದೆ. ಇಲಿಗಳು ಇವುಗಳ ಪ್ರಮುಖ ಆಹಾರವಾಗಿವೆ. ಕೆಲವೊಮ್ಮೆ ಕಪ್ಪೆಗಳು ಮತ್ತು ಹಲ್ಲಿಗಳನ್ನು ತಿನ್ನುತ್ತವೆ. ಹೆಣ್ಣು ಹಾವುಗಳು 2-22 ಮೊಟ್ಟೆಗಳನ್ನು ಸಸ್ತನಿಗಳ ಬಿಲಗಳು, ಗೆದ್ದಲು ದಿಬ್ಬಗಳು, ಮರದ ಪೊಟರೆ, ಬಿರುಕುಗಳು, ಬಂಡೆಗಳು ಅಥವಾ ಬಿದ್ದಿರುವ ಮರದ ಟೊಂಗೆಗಳ ಕೆಳಗೆ ಇಡುತ್ತವೆಂದು ದಾಖಲು ಮಾಡಲಾಗಿದೆ.



**ಸಾಮಾನ್ಯ ತೋಳದ ಹಾವು** © ಡಾ. ವರಪ್ರಸಾದ್

ಭಾರತದ ಪಶ್ಚಿಮ ಘಟ್ಟಗಳು ಮತ್ತು ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಕಾಣಸಿಗುವ ಈ ವಿಷಕಾರಿ ಹಪ್ಪಾಟೆ ಹಾವುಗಳು ವೈಪರಿಡೇ (Viperidae) ಕುಟುಂಬಕ್ಕೆ ಸೇರುತ್ತವೆ. ಇವುಗಳನ್ನು ವೈಜ್ಞಾನಿಕವಾಗಿ ಕ್ರಾಸ್ಪಿಡೋಸೆಫಾಲಸ್ ಮಲಬಾರಿಕಸ್ (Craspedocephalus malabaricus) ಎಂದು ಕರೆಯಲಾಗುತ್ತದೆ. ಎತ್ತರದ ಕಾಡುಗಳು ಹಾಗೂ ಮರಗಳಲ್ಲಿ ವಾಸಿಸುತ್ತವೆ. ಕೆಲವೊಮ್ಮೆ ತೊರೆಗಳ ಬಳಿ ಇರುವ ಬಂಡೆಗಳು ಹಾಗೂ ಮರಗಳ ಮೇಲೆ ವಿಶ್ರಮಿಸುವುದನ್ನು ಕಾಣಬಹುದಾಗಿದೆ. ಹಸಿರು, ಕಂದು, ಕಪ್ಪು ಮಿಶ್ರಿತ ಮೈಬಣ್ಣವಿರುವ ಇವುಗಳು ವಿಶಿಷ್ಟವಾದ ಕೀಲ್ಡ್ (Keeled) ಹುರುಪೆಗಳು ಮತ್ತು ತ್ರಿಕೋನಾಕಾರದ ತಲೆಯನ್ನು ಹೊಂದಿವೆ. ಇತರ ವೈಪರ್‌ಗಳಂತೆ ಇವು ಮೊಟ್ಟೆಗಳನ್ನು ಇಡುವುದಿಲ್ಲ, ಬದಲಿಗೆ ಒಂದೇ ಸಮಯದಲ್ಲಿ ನಾಲ್ಕರಿಂದ ಐದು ಮರಿಗಳಿಗೆ ಜನ್ಮ ನೀಡುತ್ತವೆ. ಈ ಮರಿಗಳು ತಮ್ಮ ಬೇಟೆಯನ್ನು ಕೊಲ್ಲುವ ಮತ್ತು ತಕ್ಷಣವೇ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಮಳೆಗಾಲದಲ್ಲಿ ಹೆಚ್ಚಾಗಿ ಕಾಣಸಿಗುವ ಈ ಹಾವುಗಳ ಆಹಾರವು, ಕಪ್ಪೆಗಳು, ಹಲ್ಲಿಗಳು, ಗೂಡುಕಟ್ಟುವ ಪಕ್ಷಿಗಳು, ಇಲಿಗಳು ಮತ್ತು ಇತರ ಸಣ್ಣ ಪ್ರಾಣಿಗಳಾಗಿವೆ.



**ಹಸಿರು ಬೆನ್ನೇಣು ಹಾವು** © ಡಾ. ವರಪ್ರಸಾದ್

ಭಾರತ ಮತ್ತು ಶ್ರೀಲಂಕಾದ ಪರ್ಯಾಯ ದ್ವೀಪಗಳಲ್ಲಿನ ಬಯಲು ಪ್ರದೇಶಗಳಲ್ಲಿ, ಬೆಟ್ಟಗಳಲ್ಲಿ ಕಂಡುಬರುವ ವಿಷಕಾರಿಯಲ್ಲದ ಈ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ರಾಬ್ಡೋಫಿಸ್ ಪ್ಲಂಬಿಕಲರ್ *(Macropisthodon plumbicolor*) ಎಂದು ಕರೆಯಲಾಗುತ್ತದೆ. ಹಿಂಭಾಗವು ಪ್ರಕಾಶಮಾನವಾದ ಹಸಿರು ಬಣ್ಣದ್ದಾಗಿದ್ದು, ಕೆಲವೊಮ್ಮೆ ಕಪ್ಪು ಪಟ್ಟೆಗಳು ಅಥವಾ ತೇಪೆಗಳನ್ನು ಹೊಂದಿರುತ್ತದೆ. ಅಗಲವಾದ ತಲೆ, ದುಂಡಗಿನ ಕಣ್ಣುಗುಡ್ಡೆಗಳು ಮತ್ತು ಕುತ್ತಿಗೆಯ ಮೇಲೆ ಕಪ್ಪು ಮತ್ತು ಹಳದಿ ಬಣ್ಣದ ತಲೆಕೆಳಗಾದ V ಆಕಾರವನ್ನು ಹೊಂದಿರುತ್ತದೆ. ತೇವಾಂಶವುಳ್ಳ ಸಸ್ಯವರ್ಗ, ದಟ್ಟವಾದ ಪೊದೆಗಳು ಮತ್ತು ಬಿದ್ದಿರುವ ಎಲೆಗಳಲ್ಲಿ ವಾಸಿಸುತ್ತದೆ. ಕಪ್ಪೆಗಳು ಇವುಗಳ ಪ್ರಮುಖ ಆಹಾರವಾಗಿವೆ. ಜಾರುವಂತಹ ಕಪ್ಪೆಗಳನ್ನು ಹಿಡಿಯಲು ವಿಶೇಷವಾದ ಉದ್ದವಾದ ಹಲ್ಲುಗಳನ್ನು ಹಿಂಭಾಗದಲ್ಲಿ ಹೊಂದಿರುತ್ತದೆ. ಇವು 8-14 ಮೊಟ್ಟೆಗಳನ್ನು ಇಡುತ್ತವೆ.



**ಮೊಂಡುಬಾಲದ ಹಾವು** © ಡಾ. ವರಪ್ರಸಾದ್

ದಕ್ಷಿಣ ಭಾರತದ ಕಾಡುಗಳಿಗೆ ಸ್ಥಳೀಯವಾಗಿರುವ ವಿಷಕಾರಿಯಲ್ಲದ ಈ ಈಲಿಯಟ್ ಗುರಾಣಿ ಹಾವು ಯುರೊಪೆಲ್ಟಿಡೆ (Uropeltidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಯುರೊಪೆಲ್ಟಿಸ್ ಎಲಿಯೋಟಿ (*Uropeltis elliot*i) ಎಂದು ಕರೆಯಲಾಗುತ್ತದೆ. ಕುತ್ತಿಗೆಯಿಂದ ಬಾಲದವರೆಗೂ ಸಿಲಿಂಡರಾಕಾರದಲ್ಲಿದ್ದು, ಹೊಳೆಯುವ ನಯವಾದ ಹುರುಪೆಗಳನ್ನು ಹೊಂದಿರುತ್ತದೆ. ಇದರ ತಲೆ ಚಿಕ್ಕದಾಗಿದ್ದು, ಕುತ್ತಿಗೆಗಿಂತ ಕಿರಿದಾಗಿರುತ್ತದೆ ಮತ್ತು ಶಂಕುವಿನಾಕಾರದ ಮೊನಚಾದ ಮೂತಿಯನ್ನು ಹೊಂದಿರುತ್ತದೆ. ಇದರ ಮೇಲ್ಭಾಗವು ಗಾಢ ಕಂದು ಅಥವಾ ಕಪ್ಪು ಮಿಶ್ರಿತ ಕಂದು ಬಣ್ಣದ್ದಾಗಿದ್ದು, ಹುರುಪೆಗಳಲ್ಲಿ ಸಣ್ಣ ಹಳದಿ ಚುಕ್ಕೆಗಳನ್ನು ಹೊಂದಿರುತ್ತದೆ. ಕುತ್ತಿಗೆ ಮತ್ತು ಬಾಲದ ಎರಡೂ ಬದಿಗಳಲ್ಲಿ ಹಳದಿ ಬಣ್ಣದ ಪಟ್ಟೆಯನ್ನು ಹೊಂದಿರುತ್ತದೆ. ಇದರ ಕೆಳಭಾಗದಲ್ಲೂ ಹಳದಿ ಚುಕ್ಕೆಗಳನ್ನು ಕಾಣಬಹುದು. ಎರೆಹುಳುಗಳು ಇವುಗಳ ಪ್ರಮುಖ ಆಹಾರವಾಗಿವೆ. ಮೊಟ್ಟೆಯು ಹೆಣ್ಣು ಹಾವಿನ ದೇಹದೊಳಗೆ ಒಡೆದು ಮರಿಗಳು ಹೊರಬರುತ್ತವೆ.

**ಚಿತ್ರ: ಡಾ. ವರಪ್ರಸಾದ್**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಮುಂಜಾನೆ ವೇಳೆಯಲ್ಲಿ ಚಿಲಿಪಿಲಿ ಕಲರವ ಕೇಳುವುದು ಎಷ್ಟು ಇಂಪು. ಹಾರುವ ಹಕ್ಕಿಯನ್ನು ಕಂಡು ನಾನು ಕೂಡ ಗಗನದಾಚೆ ಹಾರಬೇಕು ಎಂದೆನಿಸಿದ ಸಂದರ್ಭವೂ ಉಂಟು. ಭೂಮಿ ಮೇಲೆ ಸುಮಾರು 18000 ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳಿವೆ. ಪಕ್ಷಿಗಳು ಪರಾಗಸ್ಪರ್ಶ ಕ್ರಿಯೆಗೆ ಸಹಾಯ ಮಾಡುತ್ತವೆ. ಅವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹಾರುವಾಗ ಬೀಜಗಳು ಮತ್ತು ಪೋಷಕಾಂಶಗಳನ್ನು ವರ್ಗಾಯಿಸುತ್ತವೆ. ಕೃಷಿ ಉತ್ಪಾದನೆಯಲ್ಲೂ ಇವು ಮಹತ್ವದ ಪಾತ್ರವಹಿಸುತ್ತವೆ ಬೆಳೆಗಳಿಗೆ ಉಪದ್ರವ ನೀಡುವ ಕೀಟಗಳನ್ನು ತಿಂದು ಅವುಗಳ ಸಂಖ್ಯೆಗಳನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕಾನೂನುಬಾಹಿರ ಸಾಕುಪ್ರಾಣಿ ವ್ಯಾಪಾರ, ವಿವಿಧ ರೋಗಗಳು ಮತ್ತು ವಾಸಸ್ಥಾನಗಳ ನಾಶವಾಗುತ್ತಿರುವುದು ಅನೇಕ ಪಕ್ಷಿ ಪ್ರಭೇದಗಳನ್ನು ನಾಶದ ಅಂಚಿಗೆ ತಳ್ಳುತ್ತಿದೆ. ಪಕ್ಷಿಗಳ ಅಗತ್ಯತೆಗಳ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಲು ಪ್ರತಿ ಜನವರಿ 5 ರಂದು **ರಾಷ್ಟ್ರೀಯ ಪಕ್ಷಿ ದಿನ**ವೆಂದು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



## ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಛಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.

**With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.**



**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**




**SCAN TO PAY**
**WITH ANY BHIM UPI APP**
Merchant Name : WILDLIFE CONSERVATION GROUP



***- Donations are exempted from Income Tax under section 80 G (IT act 1961)**




ಕಾನನ
ಜನವರಿ-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಫೆಬ್ರವರಿ-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಮಾರ್ಚ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಏಪ್ರಿಲ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಮೇ-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಜೂನ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಜುಲೈ-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಆಗಸ್ಟ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಸೆಪ್ಟೆಂಬರ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಅಕ್ಟೋಬರ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ನವೆಂಬರ್-2025
ನಿಸರ್ಗದೆಡೆಗೆ ಪಯಣ
WCG

ಕಾನನ
ಡಿಸೆಂಬರ್-2025
ನಿಸರ್ಗದೆಡೆಗೆ ಪಯಣ
WCG